ನಂ.29, ವಿಜಯನಗರ 2 ನೇ ಹಂತ,
ಹಿನಕಲ್ ಮೈಸೂರು-570017
CIN: U40109KA2004SGC035177
Website: www.cescmysore.org

C.E.S.C. MYSORE

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾಮುಂಡಿಪುರಂ, ಮೈಸೂರು-570008
aeechpuram@gmail.com
aeecpm@cescmysore.org
ದೂರವಾಣಿ:0821-2488400

ಕ್ರಮ ಸಂಖ್ಯೆ:ಸಕಾನಿಇಂ(ವಿ)/ಚಾಉವಿ/ಸಲೆ/ಹಿಸ/2017-18/ 1157-62 ದಿನಾಂಕ: 22.06.2017

# ಸಭಾ ನಡಾವಳಿಗಳು

ದಿನಾಂಕ 13-06-2017 ನೇ ಮಂಗಳವಾರ ಮಧ್ಯಾಹ್ನ 3-00 ಗಂಟೆಗೆ [redacted] ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ವೃತ್ತ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

## ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು

1) ಶ್ರೀ.ಎನ್.ನರಸಿಂಹೇಗೌಡ, ಅ.ಇಂ(ವಿ), ಕಾ ಮತ್ತು ಪಾ ವೃತ್ತ , ಮೈಸೂರು.
2) ಶ್ರೀ.ಎಂ.ಕೆ.ಸೋಮಶೇಖರ್. ಕಾ.ಇಂ(ವಿ), ಕಾ ಮತ್ತು ಪಾ ಎನ್.ಆರ್.ಮೊಹಲ್ಲಾ ವಿಭಾಗ, ಮೈಸೂರು.
3) ಶ್ರೀ.ಪಿ.ಚಿಕ್ಕಸಿದ್ದೇಗೌಡ, ಸ.ಕಾ.ಇಂ(ವಿ), ಚಾಮುಂಡಿಪುರಂ ಉಪವಿಭಾಗ, ಮೈಸೂರು.
4) ಶ್ರೀ.ಎಸ್.ರಮೇಶ್, ಸ.ಇಂ(ವಿ), ವಿದ್ಯಾರಣ್ಯಪುರಂ ಶಾಖೆ.
5) ಶ್ರೀ.ಇ.ಮಂಜು, ಸ.ಇಂ(ವಿ), ಲಕ್ಷ್ಮಿಪುರಂ ಶಾಖೆ.
6) ಶ್ರೀಮತಿ.ಯು.ಜಿ.ಸವಿತಾ, ಸಇಂ(ತಾಂ)
7) ಶ್ರೀ.ಎಸ್.ರವಿ, ಪ್ರಭಾರ ಸಲೆ/ಹಿಸ.
8) ಶ್ರೀಮತಿ.ಬಿ.ಪಿ.ಶಾಲಿನಿ, ಕಿ.ಇಂ(ವಿ, ಜೆ.ಪಿ.ನಗರ ಶಾಖೆ.
9) ಶ್ರೀ.ಶಿವಲಿಂಗು, ಕಿ.ಇಂ(ವಿ) ವಿದ್ಯಾರಣ್ಯಪುರಂ ಶಾಖೆ,
10) ಶ್ರೀ.ರಾಮದಾಸ್, ಪ್ರಭಾರ ಸ.ಇಂ(ವಿ) ಕಡಕೊಳ ಶಾಖೆ.
11) ಶ್ರೀ.ರವಿ. ಕಿ.ಇಂ(ವಿ) ದೇವಲಾಪುರ ಶಾಖೆ

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಾಗತಿಸಿ ಕೆ.ಇ.ಆರ್.ಸಿ ಆದೇಶದಂತೆ ಈ ಜನಸಂಪರ್ಕ ಸಭೆಯನ್ನು ನಡೆಸಲಾಗುತ್ತಿದೆ ಎಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

| ಕ್ರಮ ಸಂಖ್ಯೆ | ಹೆಸರು ವಿಳಾಸ ಮೊಬೈಲ್ ಸಂಖ್ಯೆ | ಅಹವಾಲು/ಮನವಿ | ಕ್ರಮ |
|---|---|---|---|
| 1. | ಶ್ರೀಮತಿ.ರಾಜೇಶ್ವರಿ, ಕೊಪ್ಪಲೂರು. ಮೊಬೈಲ್: 9663607548 9980916458 | ಇವರು ತಮ್ಮ ಸೈಟಿನ ಮುಂದೆ ಟಿ.ಸಿ ಅಳವಡಿಸುತ್ತಿದ್ದು ತೆರವು ಮಾಡಿ ಸ್ಥಳಾಂತರಿಸಲು ಕೋರಿ ಅರ್ಜಿ ಮತ್ತು ಛಾಯಾಚಿತ್ರವನ್ನು ನೀಡಿದರು. | ಅಧೀಕ್ಷಕ ಇಂಜಿನಿಯರ್(ವಿ) ರವರು ಕಿರಿಯ ಇಂಜಿನಿಯರ್(ವಿ) ಜೆ.ಪಿ.ನಗರ ಶಾಖೆ ರವರಿಗೆ ಪರಿಶೀಲಿಸಿ ವರದಿ ನೀಡಿ ಟಿ.ಸಿ.ಸ್ಥಳಾಂತರಕ್ಕೆ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |

| | | | |
|---|---|---|---|
| 2. | ಶ್ರೀ.ಹರೀಶ ಮತ್ತು ಇತರರು (4 ಜನ) ಮಂಡಕಳ್ಳಿ. ಮೊಬೈಲ್:9964035414 | ತಮ್ಮಗಳ ಪೌಲ್ಟ್ರಿ ಫಾರಂಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ತಮ್ಮ ಪೌಲ್ಟ್ರಿ ಫಾರಂಗಳು ಜಮೀನಿನಲ್ಲಿ ಇರುವುದರಿಂದ ನಿರಂತರ ಜ್ಯೋತಿ ಯೋಜನೆಯು ಹಾಲಿ ಗ್ರಾಮಠಾಣ ವ್ಯಾಪ್ತಿಗಳಿಗೆ ಇದ್ದು, ಜಮೀನಿನ ಮನೆಗಳಿಗೆ ವಿಸ್ತರಿಸುವ ಬಗ್ಗೆ ಇಂಧನ ಇಲಾಖೆಯಿಂದ ಆದೇಶವಿರುವುದಿಲ್ಲ. ಹೀಗಾಗಿ ತಾವುಗಳು ಸ್ವಯಂ ಕಾಮಗಾರಿ ನಿರ್ವಹಣೆಯಲ್ಲಿ ವಿದ್ಯುತ್ ಲೈನ್ ಕಾಮಗಾರಿ ಮಾಡಿಕೊಂಡಲ್ಲಿ NJY ನಿಂದ ವಿದ್ಯುತ್ ಸಂಪರ್ಕ ವಿಸ್ತರಿಸಲಾಗುವುದೆಂದು ತಿಳಿಸಿದರು, |
| 3. | ಶ್ರೀಮತಿ.ಶಾರದಮ್ಮ, ವಿದ್ಯಾರಣ್ಯಪುರಂ, ಮೈಸೂರು ಮೊಬೈಲ್: 9986255137 | ಇವರು ಉಪವಿಭಾಗ ಕಛೇರಿಯನ್ನು ವಿದ್ಯಾರಣ್ಯಪುರಂನಿಂದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿರುವುದರಿಂದ ಬಿಲ್ಲಿನ ಬಗ್ಗೆ ವಿಚಾರಿಸಲು ಇತರೆ ಕಾರಣಕ್ಕಾಗಿ ಕಛೇರಿಗೆ ಭೇಟಿ ನೀಡಲು ಬಹಳ ದೂರವಾಗಿರುತ್ತದೆ ಎಂದು ತಿಳಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಈ ಹಿಂದೆ ವಿದ್ಯಾರಣ್ಯಪುರಂನಲ್ಲಿ ಬಾಡಿಗೆ ಕಟ್ಟಡದಲ್ಲಿ ಉಪವಿಭಾಗ ಕಛೇರಿ ನಡೆಸುತ್ತಿದ್ದು. ಕಟ್ಟಡವನ್ನು ಖಾಲಿ ಮಾಡಬೇಕಾದ ಸಂದರ್ಭ ಬಂದಿದ್ದರಿಂದ ಸ್ವಂತ ಕಟ್ಟಡವನ್ನು ಹೊಸದಾಗಿ ನಿರ್ಮಾಣ ಮಾಡಿ ಈಗ ಸ್ಥಳಾಂತರ ಮಾಡಿರುತ್ತೇವೆ. ಆದ್ದರಿಂದ ಸಾರ್ವಜನಿಕರು ಸಹಕರಿಸುವಂತೆ ಕೋರಿದರು. |
| 4. | ಶ್ರೀ.ಮೋಹನ್ ಕುಮಾರ್, ಜೆ.ಪಿ.ನಗರ, ಮೈಸೂರು. ಮೊಬೈಲ್: 9886515548 | ತಾತ್ಕಾಲಿಕ ಸ್ಥಾವರದ ಬಿಲ್ಲು ಪಾವತಿ ಮಾಡಲು ಈ ದಿನ ಬಂದಿದ್ದು, ನೆಟ್ ವರ್ಕ್ ಇಲ್ಲದೇ ಪಾವತಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿ ವಿದ್ಯುತ್ ಸಮಸ್ಯೆಗೆ 1912 ಕ್ಕೆ ಕರೆ ಮಾಡಿದರ ಸರಿಪಡಿಸಲು ಬಹಳ ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕಛೇರಿಯನ್ನು ಇತ್ತೀಚೆಗೆ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ್ದು ಮೆ\|\|ರಿಲಯನ್ಸ್ ನೆಟ್ ವರ್ಕ್ ನಲ್ಲಿ ಸದ್ಯಕ್ಕೆ ಲೋಪವಿದ್ದು ಸರಿಪಡಿಸುತ್ತಿದ್ದಾರೆ ಎಂದು ತಿಳಿಸಿ ನಗದು ರಶೀದಿ ಪುಸ್ತಕದಿಂದ ಹಣ ಪಾವತಿಸಿಕೊಳ್ಳಲು ಸೂಚಿಸಿದರು. ಹಾಗೆಯೇ 1912 ಕ್ಕೆ ಕರೆ ಮಾಡಿದಾಗ ತುಂಬಾ ವಿಳಂಬವಾಗುತ್ತಿಲ್ಲ. ಜೇಷ್ಠತೆ ಆಧಾರದಲ್ಲಿ ಅಟೆಂಡ್ ಮಾಡುತ್ತಾರೆ ಎಂದು ತಿಳಿಸಿ ಉಪವಿಭಾಗದ 24X7 ಸೇವಾಕೇಂದ್ರಕ್ಕೂ ಸಹ ಕರೆ ಮಾಡಿ ದೂರು ತಿಳಿಸಬಹುದೆಂದು ಮನವರಿಕೆ ಮಾಡಿಕೊಡಲಾಯಿತು. |

| | | | |
|---|---|---|---|
| | ಸೋಮೇಶ್ವರಪುರ.<br>ಮೊಬೈಲ್:9986899133 | ಸಲ್ಲಿಸಿರುತ್ತಾರೆ.<br>ವಿದ್ಯುತ್ ಕಂಬದಿಂದ ಕಂಬಕ್ಕೆ ಎಳೆದಿರುವ ತಂತಿಗಳು ಜೋತು ಬಿದ್ದುದ್ದು, ಮಧ್ಯಂತರ ಕಂಬ ಅಳವಡಿಸಲು ಕೋರಿದರು. ಹಾಗೆಯೇ ಬೀದಿ ದೀಪ ವ್ಯವಸ್ಥೆ ಸರಿಪಡಿಸಲು ಮನವಿ ಮಾಡಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸ.ಕಾ.ಇಂ(ವಿ) ರವರಿಗೆ ಶಾಖಾಧಿಕಾರಿ-ಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. ಹಾಗೆಯೇ ಬೀದಿದೀಪಗಳ ಸಂಪೂರ್ಣ ನಿರ್ವಹಣೆಯು ಸ್ಥಳೀಯ ಸಂಸ್ಥೆಗೆ ಸೇರಿರುತ್ತದೆ. ಆದ್ದರಿಂದ ಬೀದಿದೀಪಗಳ ಬಗ್ಗೆ ಏನಾದರೂ ಸಮಸ್ಯೆ ಇದ್ದಲ್ಲಿ ಗ್ರಾಮ ಪಂಚಾಯ್ತಿ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದರು. |
| 6. | ಶ್ರೀ.ಶಿವರಾಂ,<br>ಉತ್ತನಹಳ್ಳಿ.<br>ಮೊಬೈಲ್:9844094314 | ಅರ್ಜಿ ಸಲ್ಲಿಸಿರುತ್ತಾರೆ.<br>ಉತ್ತನಹಳ್ಳಿ ದೇವಸ್ಥಾನಕ್ಕೆ ಈ ಹಿಂದೆ ಎಕ್ಸ್ ಪ್ರೆಸ್ ಫೀಡರ್ ನಿಂದ 24 ಗಂಟೆ ವಿದ್ಯುತ್ ಸಂಪರ್ಕಕ್ಕಾಗಿ 10.84 ಲಕ್ಷ ರೂ ಪಾವತಿ ಮಾಡಿ ಟೌನ್ ವ್ಯಾಪ್ತಿಯಿಂದ ವಿದ್ಯುತ್ ಸೌಲಭ್ಯ ಪಡೆದಿದ್ದು, ಈಗ NJY ನಲ್ಲಿ ಉತ್ತನಹಳ್ಳಿಗೆ ವಿದ್ಯುತ್ ಸಂಪರ್ಕ ನೀಡಿರುತ್ತಾರೆ ಬದಲಾಯಿಸುವಂತೆ ಕೋರಿದರು.<br>ಹಾಗೆಯೇ ಸಂಜೆ ವೇಳೆ ಸಮಸ್ಯೆ ಇದ್ದಾಗ ದೇವಸ್ಥಾನ ಇರುವುದರಿಂದ ಚಾಮುಂಡಿಪುರಂನಲ್ಲಿ ಇರುವ 24X7 ಸೇವಾಕೇಂದ್ರದಿಂದ ಅಟೆಂಡ್ ಮಾಡಲು ಕೋರಿದರು. ಮತ್ತು ದೇವಸ್ಥಾನದ ಆವರಣದೊಳಗಿರುವ ಟಿ.ಸಿ.ಯನ್ನು ಸ್ಥಳಾಂತರಿಸಲು ಮನವಿ ಮಾಡಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಘನ ಕರ್ನಾಟಕ ಸರ್ಕಾರದ ಆದೇಶದಂತೆ ಎಲ್ಲಾ ಗ್ರಾಮಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಬೇಕಾಗಿದ್ದು, 24 ಗಂಟೆ ವಿದ್ಯುತ್ ಸೌಲಭ್ಯ ಇರುವುದರಿಂದ ಯಾವುದೇ ತೊಂದರೆಯಾಗಿರುವುದಿಲ್ಲ ಎಂದು ತಿಳಿಸಿ ಸಂಜೆ ವೇಳೆ ವಿದ್ಯುತ್ ಅಡಚಣೆ ಉಂಟಾದಲ್ಲಿ ಕೂಡಲೇ ಸರಿಪಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br>ಹಾಗೆಯೇ ದೇವಸ್ಥಾನದ ಆವರಣದೊಳಗಿರುವ ಟಿ.ಸಿ. ಯನ್ನು ಸ್ಥಳಾಂತರಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ಶಾಖಾಧಿಕಾರಿಗಳೊಂದಿಗೆ ಜಂಟಿಯಾಗಿ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |

| | | | |
|---|---|---|---|
| 7. | ಶ್ರೀ.ಶಿವಲಿಂಗೇಗೌಡ, ಗ್ರಾಮ ಪಂಚಾಯ್ತಿ ಹಾಗೂ ಗ್ರಾಹಕರ ಸಲಹಾ ಸಮಿತಿ ಸದಸ್ಯರು, ಕಡಕೊಳ. ಮೊಬೈಲ್: 9972270503 | N.J.Y ಫೀಡರ್ ನಲ್ಲಿರುವ 05 ಕಂಬ ಹಾಗೂ ಟಿ.ಸಿ ಮಳೆಯಿಂದ ಬಿದ್ದು ಹೋಗಿರುತ್ತದೆ. ಸರಿಪಡಿಸಲು ಕೋರಿ B.G ಹುಂಡಿಗೆ 24 ಗಂಟೆ ವಿದ್ಯುತ್ ಸೌಲಭ್ಯ ಕಲ್ಪಿಸಲು ಮನವಿ ಮಾಡಿದರು. ಹಾಗೆಯೇ ಬಡವರಿಗೆ ಹೊಸದಾಗಿ ಭಾಗ್ಯಜ್ಯೋತಿ ಸಂಪರ್ಕ ಕಲ್ಪಿಸಲು ಮನವಿ ಮಾಡಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರನ್ನು ವಿಚಾರಿಸಲಾಗಿ ಉಪವಿಭಾಗಾಧಿಕಾರಿಗಳು N.J.Y ಯೋಜನೆಯಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿರುವ ಪಕ್ಕದಲ್ಲಿ ಟ್ರಂಚ್ ತೋಡಿ ಮಳೆ ಬಂದಿರುವುದರಿಂದ ಕಂಬ ವಾಲಿರುತ್ತದೆ. N.J.Y ಗುತ್ತಿಗೆದಾರರಿಗೆ ಸರಿಪಡಿಸಲು ತಿಳಿಸಲಾಗಿರುತ್ತದೆ. ಅ.ಇಂ(ವಿ)ರವರು ಶ್ರೀ.ಶಿವಲಿಂಗೇಗೌಡರವರಿಗೆ ತಾವು ಸಹ ಸ್ಥಳಕ್ಕೆ ಹೋಗಿ ಸೂಕ್ತ ಜಾಗದಲ್ಲಿ ಕಂಬ ಅಳವಡಿಸಲು ಸಹಕರಿಸಲು ತಿಳಿಸಿದರು. B.G ಹುಂಡಿಗೆ N.J.Y ನಡಿ ಸಂಪರ್ಕ ನೀಡಲು ಕಾಮಗಾರಿ ನಡೆಯುತ್ತಿದ್ದು, ಪೂರ್ಣಗೊಂಡ ನಂತರ 24 ಗಂಟೆ ವಿದ್ಯುತ್ ಸೌಲಭ್ಯ ನೀಡಲಾಗುವುದೆಂದು ತಿಳಿಸಿ ಹಾಲಿ ಭಾಗ್ಯಜ್ಯೋತಿ ಯೋಜನೆ ಇಲ್ಲದಿರುವುದರಿಂದ ಹೊಸದಾಗಿ BJ / KJ ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು. |
| 8. | ಶ್ರೀ.ಮಾದಪ್ಪ ರಾಯನಹುಂಡಿ, ಮೊಬೈಲ್:8453816323 | ಮೂರು ವರ್ಷದಿಂದ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕ ನೀಡಿಲ್ಲ ಎಂದು ತಿಳಿಸಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಘನ ಸರ್ಕಾರದಿಂದ BJ/KJ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಆದೇಶ ಇಲ್ಲದಿದ್ದು, RGGVY ನಡಿ ಹೊಸದಾಗಿ ಬಡವರಿಗೆ ಸರ್ಕಾರದ ವತಿಯಿಂದಲೇ ವೈರಿಂಗ್ ಮಾಡಿಸಿ ಠೇವಣಿ ಇತರೆ ಶುಲ್ಕ ಪಾವತಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಮುಂದೆ ವಿದ್ಯುತ್ ಬಿಲ್ಲನ್ನು ಗ್ರಾಹಕರೇ LT-2 ಜಕಾತಿಯಲ್ಲಿ ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು. |

| | | | |
|---|---|---|---|
| | ಕೆ.ಎಂ.ಹುಂಡಿ<br>ಮೊಬೈಲ್:9845932366 | ಗ್ರಾಮಕ್ಕೆ NJY ಸಂಪರ್ಕ ಒದಗಿಸಲು ಕೋರಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ)ರವರು ಅಧಿಕಾರಿಗಳೊಂದಿಗೆ ಚರ್ಚಿಸಿ, NJY ಕಾಮಗಾರಿ ಪೂರ್ಣಗೊಳ್ಳುತ್ತಿದ್ದು, ಒಂದು ತಿಂಗಳ ಒಳಗಾಗಿ ಚಾಲನೆ ನೀಡಲಾಗುವುದೆಂದು ತಿಳಿಸಿದರು. |
| 10. | ಶ್ರೀ.ಕೆ.ಬಿ.ರಾಜು,<br>ಕಿರಾಳು<br>ಮೊಬೈಲ್:9739503200 | ತಮ್ಮ ಐ.ಪಿ.ಸೆಟ್ ಹತ್ತಿರ ಇರುವ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕೋರಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ)ರವರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |
| 11. | ಶ್ರೀ.ಕೆಂಪರಾಜ್ ಅರಸ್<br>ಗ್ರಾಹಕರ ಸಲಹಾ ಸಮಿತಿ ಸದಸ್ಯರು,<br>ಜೆ.ಪಿ.ನಗರ, ಮೈಸೂರು.<br>ಮೊಬೈಲ್:9742114485 | ಹೊಸ ಕಛೇರಿಗೆ ಬರಲು ಮಾನಂದವಾಡಿ ಮುಖ್ಯ ರಸ್ತೆಯ ರೋಡ್ ಡಿವೈಡರ್ ನಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ ಎಂದು ತಿಳಿಸಿ ಚಾಮುಂಡಿಪುರಂ ಹೊಸ ಉಪವಿಭಾಗ ಕಛೇರಿಗೆಹೂಟಗಳ್ಳಿ ಉಪವಿಭಾಗದಂತೆ ಹೊಸ ಪೀಠೋಪಕರಣ ಏಕೆ ನೀಡಿಲ್ಲ ಎಂದು ಕೇಳಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ)ರವರು ಅಧೀನ ಅಧಿಕಾರಿಗಳೊಂದಿಗೆ ಚರ್ಚಿಸಿ ರಸ್ತೆಯು ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ ಯಾವುದಕ್ಕೆ ಒಳಪಡುತ್ತದೆ ಎಂದು ಖಾತರಿಪಡಿಸಿಕೊಂಡು ಮಾನ್ಯ ಶಾಸಕರು, ಕೃಷ್ಣರಾಜ ವಿಧಾನ ಸಭಾ ಕ್ಷೇತ್ರ, ಇವರೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಹಾಗೆಯೇ ಚಾಮುಂಡಿಪುರಂ ಉಪವಿಭಾಗಕ್ಕೆ ಹೊಸದಾಗಿ ಪೀಠೋಪಕರಣವನ್ನು ನೀಡಲಾಗುವುದೆಂದು ತಿಳಿಸಿದರು. |
| 12. | ಶ್ರೀ.ಸಿ.ಬಾಸ್ಕರ್,<br>ಅಶೋಕಪುರಂ, ಮೈಸೂರು.<br>ಮೊಬೈಲ್:9880841510 | ನನ್ನ ಮನೆಗೆ ವಿದ್ಯುತ್ ಕಡಿತಗೊಳಿಸಿರುತ್ತಾರೆ ಎಂದು ತಿಳಿಸಿ ವಿದ್ಯುತ್ ಸಂಪರ್ಕ ನೀಡಲು ಕೋರಿದರು. | ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ)ರವರು ಅಧಿಕಾರಿಗಳೊಂದಿಗೆ ಚರ್ಚಿಸಿ ಶ್ರೀ.ಕೃಷ್ಣ ಬಿನ್ ಲೇ॥ಹೆಚ್.ವೆಂಕಟಪ್ಪ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಇಂಧನ ಸಚಿವರಿಗೆ ಮತ್ತು ಇತರರಿಗೆ ದೂರು ಸಲ್ಲಿಸಿದ್ದು, ತಾವು ತಪ್ಪು ಮಾಹಿತಿ / ದಾಖಲೆ ನೀಡಿರುವುದರಿಂದ ವಿದ್ಯುತ್ ನಿಲುಗಡೆ ಮಾಡಲಾಗಿರುತ್ತದೆ. ನಿಮ್ಮಲ್ಲಿ ಏನಾದರೂ ವ್ಯಾಜ್ಯವಿದ್ದಲ್ಲಿ ನ್ಯಾಯಾಲಯ ಮೂಲಕ ಬಗೆಹರಿಸಿಕೊಂಡು ನಂತರ ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿದರು. |

ಹಾಗೆಯೇ ಈ ಸಭೆಯಲ್ಲಿ ಹಲವು ವಿದ್ಯುತ್ ಗುತ್ತಿಗೆದಾರರು ಹಾಜರಿದ್ದು, ಅವರವರ ಸಮಸ್ಯೆಗಳನ್ನು ತಿಳಿಸಿ ಪರಿಹಾರ ಕಂಡುಕೊಂಡರು.

ನಂತರ ಎಲ್ಲರನ್ನೂ ವಂದಿಸಿ ಸಭೆಯನ್ನು ಸಂಜೆ 6-00 ಕ್ಕೆ ಮುಕ್ತಾಯಗೊಳಿಸಲಾಯಿತು,.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಚಾಮುಂಡಿಪುರಂ ಉಪವಿಭಾಗ,
ಮೈಸೂರು.

ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಲಾಗಿದೆ.

1) ಮುಖ್ಯ ಇಂಜಿನಿಯರ್(ವಿ) ಮೈಸೂರು ವಲಯ, ಚಾ.ವಿ.ಸ.ನಿ.ನಿ., ಮೈಸೂರು.
2) ಪ್ರಧಾನ ವ್ಯವಸ್ಥಾಪಕರು ( ಆ ಮತ್ತು ಮಾ.ಸಂ.) ನಿಗಮ ಕಛೇರಿ, ಚಾ.ವಿ.ಸ.ನಿ.ನಿ, ನಿಗಮ ಕಛೇರಿ, ಮೈಸೂರು
3) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ವೃತ್ತ, ಕುವೆಂಪುನಗರ, ಚಾ.ವಿ.ಸ.ನಿ.ನಿ., ಮೈಸೂರು.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ,,ಮೈಸೂರು.
5) ಕಚೇರಿ ಪ್ರತಿ / ಪ್ರ.ಕ.